ಹರಿಯುವ ಹೆಚ್ಚುವರಿ ನೀರನ್ನು ಪೂರ್ವಕ್ಕೆ ತಿರುಗಿಸಿ, ರಾಜ್ಯದ ಮಧ್ಯಭಾಗದ ಬರಪೀಡಿತ ಜಿಲ್ಲೆಗಳಿಗೆ ಮಾಲಾ ಕಾಲುವೆಗಳಿಂದ ನೀರನ್ನು ಸಂಗ್ರಹಿಸಿ, ಸೇವಾ ಕಾಲುವೆಗಳಿಂದ ಗುರುತ್ವಾಕರ್ಷಣೆಯ ಮೂಲಕ ನೀರನ್ನು ಒದಗಿಸುವ ಯೋಜನೆಯಲ್ಲಿ ಗೌರಿಬಿದನೂರು ತಾಲ್ಲೂಕು ಸಹ ಒಳಗೊಂಡಿದೆ ಈ ಯೋಜನೆಯ ಸರ್ವೆ, ತನಿಖೆ ಮತ್ತು ವಿವರವಾದ ಯೋಜನಾ ವರದಿಯ ತಯಾರಿಕೆಯ ಕಾರ್ಯವನ್ನು ಭಾರತ ಸರ್ಕಾರದ ಸ್ವಾಮ್ಯ ಸಂಸ್ಥೆಯಾದ ಮೆ ಎನ್ ಆರ್ ಎಸ್ ಎ, ಹೈದರಾಬಾದ್ ಇವರಿಗೆ ವಹಿಸಲಾಗಿದ್ದು, ಮಾಲಾ ಕಾಲುವೆಯ ವೈಮಾನಿಕ ಸಮೀಕ್ಷೆ ಕಾರ್ಯವು ಮುಗಿದಿದೆ ಸೇವಾ ಕಾಲುವೆಯ ವೈಮಾನಿಕ ಸಮೀಕ್ಷೆ ಪೂರ್ಣಗೊಂಡಿರುವುದಿಲ್ಲ ವಿವರವಾದ ಯೋಜನಾ ವರದಿ ಬಂದ ನಂತರ ಈ ಕುರಿತು ತಾಂತ್ರಿಕವಾಗಿ ಪರಿಶೀಲಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಾಗುವುದು

543(867) ಶ್ರೀ ಎನ್ ಹೆಚ್ ಶಿವಶಂಕರ್ ರೆಡ್ಡಿ (ಗೌರಿಬಿದನೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖಾ ವ್ಯಾಪ್ತಿಯಲ್ಲಿರುವ ರಸ್ತೆಗಳು ಹದಗೆಟ್ಟು, ರೈತಾಪಿ ವರ್ಗದವರ, ನಾಗರೀಕರು, ಜಾನುವಾರುಗಳ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಹಲವಾರು ಗ್ರಾಮಗಳಲ್ಲಿ ರಸ್ತೆಗಳು ದುಸ್ಥಿತಿಯಲ್ಲಿದ್ದು, ಇದರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ಹಾಗೂ ರಸ್ತೆಯ ದುರಸ್ತಿಗೆ ಬಿಡುಗಡೆ ಮಾಡಲಾದ ಅನುದಾನವೇನು, (ವಿವರವಾರು ಒದಗಿಸುವುದು)

ಇ) ಗ್ರಾಮೀಣ ಭಾಗದ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಸರ್ಕಾರ ಯಾವುದಾದರೂ ಯೋಜನೆಯನ್ನು ತಯಾರಿಸಿದೆಯೇ, ಈ ಯೋಜನೆಯ ಉದ್ದೇಶವೇನು, ಇದನ್ನು ಜಾರಿಗೆ ತಂದು ಸರ್ಕಾರವು ಗ್ರಾಮೀಣ ಭಾಗದ ಜನತೆಗೆ ಅನುಕೂಲ ಯಾವಾಗ ಮಾಡಿಕೊಡುವುದು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರಸ್ತೆಗಳನ್ನು ಅಭಿವೃದ್ಧಿಪಡಿಸುವ ಅಗತ್ಯ ಕಂಡುಬಂದಿದೆ

ಆ) ಗೌರಿಬಿದನೂರು ತಾಲ್ಲೂಕಿನ ಗ್ರಾಮೀಣ ರಸ್ತೆಗಳ ದುರಸ್ತಿ/ ಅಭಿವೃದ್ಧಿಗಾಗಿ 2006–07ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ

(ರೂ ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಗಳು	ಅನುದಾನ
1	12ನೇ ಹಣಕಾಸು ಆಯೋಗ	77 77
2	ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (3054)	72 01
3	ಗ್ರಾಮೀಣ ಸಂಪರ್ಕ ಮತ್ತು ಸೇತುವೆಗಳು (5054)	13 40
4	ನಬಾರ್ಡ್ ಆರ್‌ಐಡಿಎಫ್	13 00
5	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ	
	ಅ) ಮಿಸ್ಸಿಂಗ್ ಲಿಂಕ್ ಹಂತ–2	51 50
	ಆ) ಹಂತ–5 ಬ್ಯಾಚ್–2	516 95
	ಇ) ಹಂತ–4	576 57
	ಒಟ್ಟು	**1321 20**

ಇ) 2006–07ನೇ ಸಾಲಿನಲ್ಲಿ ಸರ್ಕಾರವು ಗ್ರಾಮೀಣ ಭಾಗದ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು 12ನೇ ಹಣಕಾಸು ಆಯೋಗದ ಯೋಜನೆ, ಗ್ರಾಮೀಣ ಸಂಪರ್ಕ ಮತ್ತು ಸೇತುವೆಗಳು (5054) ಹಾಗೂ ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (3054), ನಬಾರ್ಡ್ ಹಾಗೂ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗಳನ್ನು ತಯಾರಿಸಿದೆ ಈ ಯೋಜನೆಗಳು ಸದ್ಯಕ್ಕೆ ಜಾರಿಯಲ್ಲಿದ್ದು, ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆ ಮೇರೆಗೆ ಕಾಮಗಾರಿಗಳನ್ನು ಜಾರಿಗೊಳಿಸಲಾಗುತ್ತಿದೆ